ಮದ್ದೂರಿಂ ತಾಲ್ಲೂಕಿನ ಬೆಸಗರಹಳ್ಳಿಯ ಕಿರಿಯ ಕಾಲೇಜಿನ ವಿದ್ಯಾರ್ಥಿಗಳಿಗೆ ಸ್ಥಳಾವಕಾಶದ ತೊಂದರೆ

೧೧೯೯. **ಶ್ರೀ ಬಿ. ಅಪ್ಪಾಜಿಗೌಡ (ಮದ್ದೂರು).**—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಮದ್ದೂರು ತಾಲ್ಲೂಕು ಬೆಸಗರಹಳ್ಳಿ ಕಿರಿಯ ಕಾಲೇಜಿನಲ್ಲಿ ಸುಮಾರು ೧೨೦೦ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸ್ಥಳಾವಕಾಶಕ್ಕೆ ತುಂಬಾ ತೊಂದರೆ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ,

(ಆ) ಹಾಗಿದ್ದಲ್ಲಿ ಅದರ ಪರಿಹಾರಕ್ಕೆ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ.

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು),—

(ಅ) ವಿದ್ಯಾರ್ಥಿ ಸಂಖ್ಯೆ ೭೨೧
ಸ್ಥಳಾಭಾವ ಇರುವುದು ನಿಜ

(ಆ) ಈ ಕೂಡಲೇ ಕಟ್ಟಡಗಳ ಬೇಡಿಕೆಯನ್ನು ಪೂರೈಸಲು ಸಾಧ್ಯವಿಲ್ಲವಾದ್ದರಿಂದ ಪಾಳಿ ಪ್ರಕಾರ ಶಾಲೆಯನ್ನು ನಡೆಸಲು ಸೂಚಿಸಲಾಗಿದೆ

ಖಾಸಗಿ ಪ್ರೌಢ ಶಾಲೆಗಳ ಮಂಜೂರಾತಿ

೧೨೪೩. **ಶ್ರೀ ಎನ್.ಆರ್. ಲಕ್ಷ್ಮಯ್ಯ (ಬೀರೂರು).**—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಪ್ರಸಕ್ತ ಸಾಲಿನಲ್ಲಿ ಸರ್ಕಾರದವರು ಮಂಜೂರಾತಿ ಮಾಡಿರುವ ಖಾಸಗೀ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು,

(ಆ) ಮಂಜೂರಾತಿ ಮಾಡಿರುವುದರಿಂದ ೫ ವರ್ಷಗಳ ನಂತರ ಸರ್ಕಾರದವರಿಗೆ ತೊಂದರೆ ಯಾಗುವುದಿಲ್ಲವೆ ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು),—

(ಅ) ೧೯೮೫-೮೬ನೇ ಸಾಲಿಗೆ ೨೮೯ ಖಾಸಗಿ ಪ್ರೌಢ ಶಾಲೆಗಳಿಗೆ ಮಂಜೂರಾತಿ ನೀಡಲಾಗಿದೆ.

(ಆ) ವ್ಯಾಪಕವಾಗಿ ಶಿಕ್ಷಣ ಸೌಲಭ್ಯಗಳನ್ನು ಒದಗಿಸುವುದು, ಸರ್ಕಾರದ ಧೋರಣೆಯಾಗಿರುವುದರಿಂದ ಇದನ್ನು ತೊಂದರೆಯೆಂದು ಭಾವಿಸಲಾಗುವುದಿಲ್ಲ.

ಶಿರಾದಲ್ಲಿರುವ ವಂಹಿಳಾ ಉರ್ದು ಶಾಲೆ ಕಟ್ಟಡದ ದುರಸ್ತಿ ಮಾಡಬೇಕಾಗಿರುವುದು

೧೧೧೫. **ಶ್ರೀ ಸಿ. ಪಿ. ಮುದ್ದಲಗಿರಿಯಪ್ಪ (ಶಿರಾ).**— ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿರಾದಲ್ಲಿನ ಉರ್ದು ಮಂಹಿಳಾ ಉನ್ನತ ಪ್ರಾಥಮಿಕ ಶಾಲಾ ಕಟ್ಟಡವು ಬಿದ್ದು ಹೋಗುವ ಪರಿಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಮತ್ತೊಂದು ಕಟ್ಟಡದ ಬೇಡಿಕೆಯು ಹಾಗೂ ಈಗ ಹಾಲಿ ಕಟ್ಟಡದ ದುರಸ್ತಿ ಬಗ್ಗೆ ಸರ್ಕಾರದವರಿಗೆ ಮನವಿ ಸಲ್ಲಿಸಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಹೆಚ್. ಜಿ. ಗೋವಿಂದೇಗೌಡ(ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು);—

ಅ) ಕಟ್ಟಡವು ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ನಿಜ.

ಇ) ೧೯೮೫–೮೬ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕಟ್ಟಡ ನಿರ್ಮಾಣ ತೆಗೆದುಕೊಳ್ಳಲು ತಿಳಿಸಲಾಗಿದೆ.

ಪ್ರಾಥಮಿಕ ಉಪಾಧ್ಯಾಯರಿಗೆ ಹೈದರಾಬಾದ್ ವೇತನ ಶ್ರೇಣಿಯನ್ನು ಕೊಡುವುದು

೧೦೮೯. ಶ್ರೀ ಎಂ ಎಸ್. ಕೃಷ್ಣನ್ (ರಾಜಾಜಿನಗರ) — ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಕರಿಗೆ ಹೈದರಾಬಾದ್ ವೇತನ ಶ್ರೇಣಿಯನ್ನು ಕೊಟ್ಟು ಮತ್ತೆ ಅವರು ನಿವೃತ್ತಿ ಹೊಂದಿದಾಗ ಅದನ್ನು ವಿಶ್ರಾಂತಿ ವೇತನದಲ್ಲಿ ಹಿಡಿಯುವುದಕ್ಕೆ ಕಾರಣವೇನು?

ಆ) ವಿದ್ಯಾ ಇಲಾಖೆಯ ಇತ್ತೀಚಿನ ಆಜ್ಞೆಯ ಪ್ರಕಾರ ಜನವರಿ ೧೯೮೪ರ ನಂತರ ನಿವೃತ್ತಿ ಹೊಂದಿದ ಹೈದರಾಬಾದ್ ವೇತನ ಶ್ರೇಣಿಯನ್ನು ಪಡೆದ ಉಪಾಧ್ಯಾಯರುಗಳಿಗೆ ಪೂರ್ತಿ ವಿಶ್ರಾಂತಿ ವೇತನ ಹಾಗೂ ಡಿಸಿಆರ್‌ಜಿ ಕೊಡಬಹುದೆಂದಿರುವ ಉದ್ದಿಶ್ಯವೇನು ?

ಇ) ಜನವರಿ ೧೯೮೪ರ ಹಿಂದಿದ್ದ ನಿವೃತ್ತಿ ಹೊಂದಿದವರಿಗೆ ವಿಶ್ರಾಂತಿ ವೇತನವನ್ನು ಹಿಡಿದಿರುವಾಗ ಈ ರೀತಿಯ ಆಜ್ಞೆ ಮಲತಾಯಿ ಧೋರಣೆಯಾಗುವುದಿಲ್ಲವೇ ?

ಈ) ಈ ಬಗ್ಗೆ ಸರ್ಕಾರದವರ ನಿಲುವೇನು ಮತ್ತು ಸೊಂದ ಉಪಾಧ್ಯಾಯರಿಗೆ ಯಾವ ರೀತಿ ಪರಿಹಾರವನ್ನು ಸರ್ಕಾರದವರು ಕೊಡುತ್ತಾರೆ ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು)—

ಅ) ಸರ್ಕಾರಿ ಆದೇಶದ ಸೌಲಭ್ಯವು ೧–೧೧–೫೬ರ ನಂತರ ಸೇವೆಗೆ ಸೇರಿದ ಶಿಕ್ಷಕರಂಗಳಿಗೆ ತಪ್ಪಾಗಿ ವಿಸ್ತರಿಸಲಾಗಿತ್ತು. ಈ ವಿಷಯ ಸರ್ಕಾರದ ಗಮನಕ್ಕೆ ಬಂದ ಕೂಡಲೇ ೧–೧೧–೫೬ರ ನಂತರ ಸೇವೆಗೆ ಸೇರಿದವರಿಗೆ ಕೊಟ್ಟ ಹೆಚ್ಚಿನ ಹಣವನ್ನು ಹಿಡಿಯಲು ಕ್ರಮ ಕೈಗೊಳ್ಳಲಾಗಿತ್ತು.

ಆ) ಮತ್ತು ಇ) ದಿನಾಂಕ ೧೭–೧–೮೪ರ ಸರ್ಕಾರಿ ಆದೇಶವು ೧–೧೧–೫೬ರ ನಂತರ ಸೇವೆಗೆ ಸೇರಿದ್ದು ನಂತರ ನಿವೃತ್ತಿ ಹೊಂದಿ, ಹೈದರಾಬಾದ್ ವೇತನ ಶ್ರೇಣಿಯನ್ನು ಪಡೆದಿದ್ದು ಹೆಚ್ಚಾಗಿ ಪಡೆದ ಹಣವನ್ನು ಅವರ ಉಪದಾನ ಹಾಗೂ ವಿಶ್ರಾಂತಿ ವೇತನದಲ್ಲಿ ಹಿಡಿಯಬಾರದೆಂದು ತಿಳಿಸಿರುವುದು ಎಲ್ಲ ನಿವೃತ್ತ ಪ್ರಾಥಮಿಕ ಶಾಲಾ ಶಿಕ್ಷಕರುಗಳಿಗೆ ಅನ್ವಯಿಸುವುದರಿಂದ ಜನವರಿ ೧೯೮೪ರ ಮುಂಚೆ ನಿವೃತ್ತಿ ಹೊಂದಿದವರು ಹಾಗೂ ಜನವರಿ ೮೪ರ ನಂತರ ನಿವೃತ್ತಿ ಹೊಂದಿದವರೆಂಬ ತಾರತಮ್ಯ ವಿರುವುದಿಲ್ಲ.

ಈ) ಈ ಬಗ್ಗೆ ಮಹಾ ಲೇಖಪಾಲರು ೧೯೫೬ರ ನಂತರ ಸೇವೆಗೆ ಸೇರಿ ಹೈದರಾಬಾದ್ ವೇತನ ಶ್ರೇಣಿಯನ್ನು ಪಡೆದು ಅವರಿಗೆ ಸಂದಾಯವಾಗಿರುವ ಹೆಚ್ಚಿನ ಹಣವನ್ನು ಹಿಡಿದಿಟ್ಟುಕೊಂಡಿದ್ದು (ವಿತ್‌ಹೆಲ್ಡ್) ಈ ಹಣವನ್ನು ಬಿಡುಗಡೆ ಮಾಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿರುವ ಪ್ರಾಥಮಿಕ ಶಿಕ್ಷಕರಿಗೆ ಹೈದರಾಬಾದ್ ಸ್ಕೇಲ್ ಮಂಜೂರು ಮಾಡಿರುವುದು

೧೪೦೩. ಶ್ರೀ ಎಸ್. ಜಿ. ನಂಜಯ್ಯನ ಮಠ್ (ಗುಳೇದಗುಡ್ಡ).— ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಕರಿಗೆ ಹೈದರಾಬಾದ್ ಸ್ಕೇಲ್ ಎಷ್ಟು ಶಿಕ್ಷಕರಿಗೆ ದೊರೆತಿದೆ ?

ಆ) ಈ ದೊರಕಿಸಿಕೊಂಡವರಿಗೆ ಯಾವ ಆಧಾರದ ಮೇಲೆ ಮಂಜೂರು ಮಾಡಲಾಗಿದೆ ?

ಇ) ಈ ಸೌಲಭ್ಯ ಪಡೆಯಲಾರದೆ ಉಳಿದಿರುವ ಶಿಕ್ಷಕರೆಷ್ಟು, ಹಾಗೂ ಅವರಿಗೆ ಯಾವಾಗ ಮಂಜೂರು ಮಾಡಲಾಗುವುದು ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು)—

ಅ) ೪೭,೯೮೮

ಆ) ಸರ್ಕಾರಿ ಆದೇಶ ಸಂಖ್ಯೆ ಇಡಿ ೭ ಪಿಎಂಡಬ್ಲ್ಯೂ ೭೮ ದಿನಾಂಕ ೧೦–೮–೧೯೭೯ರನ್ವಯ ಮಂಜೂರು ಮಾಡಲಾಗಿದೆ.

ಇ) ೨೦,೫೯೭, ಈ ಶಿಕ್ಷಕರಿಗೆ ಸರ್ಕಾರಿ ಆದೇಶವ ವಿಸ್ತರಣೆ ಮಾಡುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.